ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕಃ 27.03.2024.

**ಪಾಟೀ ಸವಾಲುಃ** ವಾದಿ ಪರ ಶ್ರೀ ಪಿ.ಎನ್.ಎಸ್. ವಕೀಲರಿಂದಃ

ಸಾಯಬಣ್ಣ ಶ್ರೀಮಂತ ಇದ್ದ ಎಂದರೆ ಸರಿ. ಊರಲ್ಲಿ ಲೇವಾದೇವಿ ವ್ಯವಹಾರ ಮಾಡುತ್ತಿದ್ದ ಎಂದರೆ ಸರಿಯಲ್ಲ. ಸಾಯಬಣ್ಣನ ಒಂದು ಜಮೀನಿನಲ್ಲಿ ಒಂದು ಕಾಲುವೆ ಹೋಗಿದೆ ಹಾಗೂ ಒಂದು ತೆರೆದ ಬಾವಿ ಇರುತ್ತದೆ ಎಂದರೆ ಸರಿ. ಸದರಿ ನೀರಾವರಿ ಜಮೀನಿನಿಂದ ಸಾಯಬಣ್ಣನಿಗೆ ತುಂಬಾ ಉತ್ಪನ್ನ ಇತ್ತು ಎಂದರೆ ಸರಿಯಲ್ಲ. ಸಾಯಬಣ್ಣನಿಗೆ

ಯಾವತ್ತು ಕರ್ಜಾ ಇರಲಿಲ್ಲ ಎಂದರೆ ಸರಿ. ಸಾಯಬಣ್ಣನಿಗೆ ಜಮೀನಿನನ್ನು ಮಾರಾಟ ಮಾಡುವ ಯಾವುದೇ ಅವಶ್ಯಕತೆ ಬಂದಿಲ್ಲ ಎಂದರೆ ಸರಿ. ಸಾಯಬಣ್ಣ ಇರುವವರೆಗೂ ಆತನ ಕುಟುಂಬ ಜಂಟಿಯಾಗಿ ಇತ್ತು ಎಂದರೆ ಸರಿ. ಸಾಯಬಣ್ಣ ಇರುವವರೆಗೂ ಮನೆಯ ಕಾರುಬಾರು ಮಾಡಿಕೊಂಡು ಹೋಗುತ್ತಿದ್ದ ಎಂದರೆ ಸರಿ.

ಅಂಬಾರಾಯನಿಗೆ ಒಂದು ಮದುವೆಯಾಗಿದೆ ಆತನ ಹೆಂಡತಿ ಹೆಸರು ವಿಮಲಾಬಾಯಿ ಇರುತ್ತದೆ ಎಂದರೆ ಸರಿ. ಅಂಬಾರಾಯ ಮತ್ತು ವಿಮಲಾಬಾಯಿ ರವರಿಗೆ ಒಬ್ಬ ಮಗ ಶರಣಬಸಪ್ಪ ಇದ್ದ ಎಂದರೆ ಸರಿ. ಅಂಬಾರಾಯ ಲಲಿತಾಬಾಯಿ ಎಂಬುವವರನ್ನು ಇಟ್ಟುಕೊಂಡಿರುತ್ತಾನೆ ಎಂದರೆ ಸರಿ. ಲಲಿತಾಬಾಯಿಯನ್ನು ಮನೆಗೆ ಕರೆದುಕೊಂಡು ಬಂದಾಗಿನಿಂದಲೂ ಅಂಬಾರಾಯ ತನ್ನ ಹೆಂಡತಿ ಮತ್ತು ಮಗನಾದ ವಾದಿಯರನ್ನು ಮನೆಯಿಂದ ಹೊರಗೆ ಹಾಕಿರುತ್ತಾನೆ ಎಂದರೆ ಸರಿ.

ಈ ದಾವೆಯಲ್ಲಿ 1ನೇ ಪ್ರತಿವಾದಿ ಹಾಜರಾಗಿ ಶ್ರೀ ಬಿ.ಎ.ಡಿ. ವಕೀಲರನ್ನು ನೇವಿಸಿಕೊಂಡು ಜವಾಬ್ ಹಾಕಿ ನಂತರ ತಿರಿಕೊಂಡಿರುತ್ತಾನೆ ಎಂದರೆ ಸರಿ. ಸಾಯಬಣ್ಣ ಪ್ರಮಾಣಿಕ ವ್ಯಕ್ತಿ ಹಾಗೂ ಯಾವತ್ತು ಸುಳ್ಳು ಮಾತನಾಡುತ್ತಿರಲಿಲ್ಲ ಎಂದರೆ ಸರಿ. ಸಾಯಬಣ್ಣ ತನ್ನ ವಕೀಲರ ಮುಖಾಂತರ ಜವಾಬ್ ಹಾಕಿ ಯಾವುದೇ ಹಂಚಿಕೆಯಾಗಿರುವುದಿಲ್ಲ ಎಂದುದ ಹೇಳಿರುತ್ತಾನೆ ಎಂದರೆ ಸರಿಯಲ್ಲ. ಸಾಯಬಣ್ಣ ತಾನು ಜೀವಂತ ಇರುವವರೆಗೂ ಯಾವುದೇ ಹಂಚಿಕೆ ಮಾಡಿಕೊಟ್ಟಿಲ್ಲ ಎಂದರೆ ಸರಿಯಲ್ಲ. ಸದರಿ ಹಂಚಿಕೆ ಮಾಡಿ ಸುಮಾರು 25 ವರ್ಷವಾಗಿರುತ್ತದೆ. ಸಾಯಬಣ್ಣ ಸದರಿ ಹಂಚಿಕಯಲ್ಲಿ ಯಾರು-ಯಾರಿಗೆ ಎಷ್ಟು ಜಮೀನು ಕೊಟ್ಟಿರುತ್ತಾನೆ ಎಂಬುವುದರ ಬಗ್ಗೆ ನನಗೆ ನಿಖರವಾಗಿ

ಗೊತ್ತಿಲ್ಲ.

ದಾವಾ ಸ್ವತ್ತುಗಳು ಸಾಯಬಣ್ಣನಿಗೆ ಹಿರಿಯರಿಂದ ಬಂದ ಸ್ವತ್ತುಗಳು ಆಗಿರುತ್ತವೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತುಗಳ ಹಂಚಿಕೆ ನನ್ನ ಸಮಕ್ಷಮ ಆಗಿಲ್ಲ ಎಂದರೆ ಸರಿಯಲ್ಲ. ಸದರಿ ಹಂಚಿಕೆ ನೋಂದ ಆಗಿದ್ದರ ಬಗ್ಗೆ ನನಗೆ ಗೊತ್ತಿಲ್ಲ. ಸಾಯಬಣ್ಣ ನನಗೆ ತಾನು ತನ್ನ ಮಕ್ಕಳಿಗೆ ಹಂಚಿಕೆ ಮಾಡಿಕೊಟ್ಟಿದ್ದರ ಬಗ್ಗೆ ಹೇಳಿದ ನಂತರ ನನಗೆ ಗೊತ್ತಾಗಿರುತ್ತದೆ. ಸಾಕ್ಷಿ ಮುಂದುವರೆದು ಸಹಿ ಮಾಡು ಎಂದು ಸಾಯಬಣ್ಣ ಹೇಳಿದ್ದರಿಂದ ಮೇರೆಗೆ ನಾನು ಸಹಿ ಮಾಡಿರುತ್ತೇನೆ. ಸಾಯಬಣ್ಣ ಇರುವವರೆಗೂ ದಾವಾ ಸ್ವತ್ತಿನ ಮನೆಯಲ್ಲಿ ಎಲ್ಲರು ಇರುತ್ತಿದ್ದರು ಎಂದರೆ ಸರಿ. ದಾವಾ ಸ್ವತ್ತಿನ ನೀರಾವರಿ ಭೂಮಿಗಳು ಎಕರೆಗೆ ರೂ.10 ಲಕ್ಷ ಇರುತ್ತವೆ ಎಂದರೆ, ಸಾಕ್ಷಿ ಸುಮಾರು ರೂ.8 ಲಕ್ಷ ಎಂದು ನುಡಿಯುತ್ತಾರೆ.

ಸಾಯಬಣ್ಣ ಇರುವವರೆಗೂ ಯಾವತ್ತು ಭೂಮಿಯನ್ನು ಮಾರಾಟ ಮಾಡಿಲ್ಲ ಎಂದರೆ ಸರಿ. ಅಂಬಾರಾಯ ರವರಿಗೆ ದಾವಾ ಸ್ವತ್ತುಗಳಲ್ಲಿ 1/4 ಹಿಸ್ಸೆ ಬರುತ್ತದೆ ಎಂದರೆ ಸರಿ. 4 ನೇ ಪ್ರತಿವಾದಿ ಬೆಂಗಳೂರಿನಲ್ಲಿ 20 ವರ್ಷಗಳಿಂದ ಇರುತ್ತಾನೆ ಎಂದರೆ ಸರಿ. ನಾನು ಸಹಿ ಮಾಡಿದ ದಾಖಲೆಗೆ ಬೇರೆ ಯಾರು ಸಹಿ ಮಾಡಿರುತ್ತಾರೆ ಎಂಬುವುದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು 4 ನೇ ಪ್ರತಿವಾದಿ ಕೂಡಿ ದಾವೆ ಚಾಲ್ತಿ ಕಾಲಕ್ಕೆ ಇಬ್ಬರು ಸೇರಿ ಒಂದು ದಾಖಲೆಯನ್ನು ಸೃಷ್ಠಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿ ಹೇಳಿದ ಹೇಳಿಕೆ ಮೇರೆಗೆ ಹಂಚಿಕೆಯಾಗಿದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಇವತ್ತಿನವರೆಗೂ ಎಲ್ಲರು ಕೂಡಿ ದಾವಾ ಜಮೀನುಗಳನ್ನು ಜಂಟಿಯಾಗಿ ಸಾಗುವಳಿ ಮಾಡುತ್ತಾರೆ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**